## 2015 ಕ.ತೀ.ವ. 326

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮಮೋಹನ್ ರೆಡ್ಡಿ

## ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ –ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು *

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ದಿನಾಂಕ 24.2.2012ರಂದು ಎರಡನೇ ಎದುರುದಾರರು ಹೊರಡಿಸಿದ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಕೋರಿ ಸದರಿ ರಿಟ್ ಅರ್ಜಿ.**

**ವಿದ್ಯುಚ್ಛಕ್ತಿ ನಿಯಮಾವಳಿ 13ರಡಿಯಲ್ಲಿ ಕೇಂದ್ರ ಸರ್ಕಾರವು ನಿಯಮಾವಳಿಯನ್ನು ರೂಪಿಸಿ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಪುನರವಲೋಕನಾ ಅರ್ಜಿಯನ್ನು ಸಲ್ಲಿಸಲು ಉಂಟಾದ ಕಾಲವಿಳಂಬವನ್ನು 30 ದಿನಗಳ ನಂತರವೂ ವಿಸ್ತರಿಸಲು ನ್ಯಾಯಾಧಿಕರಣದ ವಿವೇಚನೆಗೆ ನೀಡಿದೆ. ನಿಯಮಾವಳಿ 107ರಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ನೀಡಿದ ವಿವಾದಿತ ಅಧಿಸೂಚನೆಯನ್ನು ಎತ್ತಿಹಿಡಿದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇಖಿಸಿದೆ.**

**ರಿಟ್ ಅರ್ಜಿ ಸಂಖ್ಯೆ: 27999/2014**

ಅಪೀಲುದಾರರ ಪರ : ಶ್ರೀ ಎಸ್. ಶ್ರೀರಂಗ – ವಕೀಲರು

1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಪ್ರೇಮಾ ಹಟ್ಟಿ – ಸಿ.ಜಿ.ಎಸ್.ಸಿ

2ನೇ ಪ್ರತ್ಯರ್ಜಿದಾರರ ಪರ : ಶ್ರೀ ದಿನೇಶ್ ಕುಮಾರ್ – ಸಿ.ಜಿ.ಎಸ್.ಸಿ

3ನೇ ಪ್ರತ್ಯರ್ಜಿದಾರರ ಪರ : ಶ್ರೀ ಟಿ.ಎಸ್. ಅಮರ್ ಕುಮಾರ್ – ವಕೀಲರು

4ನೇ ಪ್ರತ್ಯರ್ಜಿದಾರರ ಪರ : ಶ್ರೀ ಶ್ರೀಧರ್ ಪ್ರಭು – ವಕೀಲರು.

* ರಿಟ್ ಅರ್ಜಿ ಸಂ. 27999/2014 ಮತ್ತು ಸಂಬಂಧಿತ (ಜಿಎಂ–ಕೆಇಬಿ),
ದಿನಾಂಕ: 30ನೇ ಜೂನ್, 2014.

**ರಿಟ್ ಅರ್ಜಿ ಸಂಖ್ಯೆ: 28217/2013 :**

1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಪ್ರೇಮಾ ಹಟ್ಟಿ – ಸಿ.ಜಿ.ಎಸ್.ಸಿ
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಪಿ.ಎಸ್. ದಿನೇಶ್ ಕುಮಾರ್ – ಸಿ.ಜಿ.ಎಸ್.ಸಿ
3ನೇ ಪ್ರತ್ಯರ್ಜಿದಾರರ ಪರ : ಶ್ರೀ ಟಿ.ಎಸ್. ಅಮರ್ ಕುಮಾರ್ – ವಕೀಲರು
4ನೇ ಮತ್ತು 5ನೇ ಪ್ರತ್ಯರ್ಜಿದಾರರಿಗೆ ಜಾರಿಗೊಳಿಸಲಾಗಿದೆ

## ಆಜ್ಞೆ

**ನ್ಯಾಯಮೂರ್ತಿ ಶ್ರೀ ರಾಮಮೋಹನ್ ರೆಡ್ಡಿ :**

ವಿವಾದಾಂಶಗಳು ಒಂದೇ ರೀತಿಯದಾಗಿದ್ದು, ರೂಪಿಸಿದ ನಿರ್ಣಯಕ್ಕೆ ಸಂಬಂಧಿಸಿದಂತೆ ಅನ್ವಯಿಸಬೇಕಾದ ಕಾನೂನು ಕೂಡ ಒಂದೇ ರೀತಿಯಾಗಿರುವುದರಿಂದ, ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ, ಅರ್ಜಿಗಳನ್ನು ಒಟ್ಟಿಗೆ ಸೇರಿಸಿ, ಅಂತಿಮವಾಗಿ ಸುನಾವಣೆ ಮಾಡಿ, ಇದನ್ನು ಈ ಆಜ್ಞೆಯ ಮೂಲಕ ವಿಲೇಖಿಸಲಾಗಿರುತ್ತದೆ.

2. ವಿದ್ಯುಚ್ಛಕ್ತಿ ಅಪೀಲು ನ್ಯಾಯಾಧಿಕರಣವು, ವಿದ್ಯುಚ್ಛಕ್ತಿ ಅಧಿನಿಯಮ, 2003ರ 120(2)(ಎಫ್) ಪ್ರಕರಣದಡಿಯಲ್ಲಿ ಪುನರವಲೋಕನ ಅರ್ಜಿಯನ್ನು ಸಲ್ಲಿಸಿರುವುದರ ಮೇಲೆ ಮಾನ್ಯ ಅಧ್ಯಕ್ಷರು 14.9.2012ರಂದು ಹೊರಡಿಸಿದ ಪ್ರಕ್ರಿಯಾ ನಿರ್ದೇಶನಗಳಡಿಯಲ್ಲಿ ಗೊತ್ತುಪಡಿಸಿದ 30 ದಿನಗಳನ್ನು ಮೀರಿದ ಕಾಲ ವಿಸ್ತರಣೆಯನ್ನು ಸಮರ್ಥಗೊಳಿಸಿರುವಂಥ ವಿದ್ಯುಚ್ಛಕ್ತಿ ಅಪೀಲು ನ್ಯಾಯಾಧಿಕರಣ (ಪ್ರಕ್ರಿಯೆ, ವಿಧಾನ, ಶುಲ್ಕ ಮತ್ತು ನಡಾವಳಿಯ ದಾಖಲೆ) ನಿಯಮಗಳು, 2007 (ಸಂಕ್ಷಿಪ್ತವಾಗಿ ನಿಯಮಗಳು ಎಂದು ಕರೆಯಲಾಗಿರುತ್ತದೆ)ರ 13ನೇ ನಿಯಮದ ಹಿನ್ನೆಲೆಯಲ್ಲಿ ಪುನರವಲೋಕನ ಅರ್ಜಿಯನ್ನು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲು ನಿರ್ದೇಶಿಸಿರುತ್ತದೆಂಬುದು ಅರ್ಜಿದಾರರ ಸಾಮಾನ್ಯ ಅಳಲಾಗಿರುತ್ತದೆ. ಹಾಗಾಗಿ

ಈ ಅರ್ಜಿಗಳು, ಈ ಮುಂದಿನ ಸಾಮಾನ್ಯ ಪರಿಹಾರಗಳನ್ನು ಕೋರಿರುತ್ತವೆ, ಅವುಗಳೆಂದರೆ,–

ಎ. ''ಸಂ. ಉಲ್ಲೇಖ–ಎಪಿಟಿಇಎಲ್/ರಿಜಿಸ್ಟ್ರಿ/ಪ್ರೋಸೀಜರ್–2012 ಸಂಖ್ಯೆಯನ್ನು ಹೊಂದಿರುವ ಕಡತದ ಮೇಲೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಉಪಬಂಧಗಳ ವ್ಯಾಪ್ತಿಯನ್ನು ಮೀರಿ 2ನೇ ಪ್ರತ್ಯರ್ಜಿದಾರರು ಹೊರಡಿಸಿರುವ 24.02.2012ನೇ ದಿನಾಂಕದ ಅಧಿಸೂಚನೆಯನ್ನು ರದ್ದುಪಡಿಸುವುದು;

ಬಿ. ಸಂ. ಉಲ್ಲೇಖ–ಎಪಿಟಿಇಎಲ್/ರಿಜಿಸ್ಟ್ರಿ/ಪ್ರೋಸೀಜರ್–2012 ಸಂಖ್ಯೆಯನ್ನು ಹೊಂದಿರುವ ಕಡತದ ಮೇಲೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಉಪಬಂಧಗಳ ವ್ಯಾಪ್ತಿಯನ್ನು ಮೀರಿ 2ನೇ ಪ್ರತ್ಯರ್ಜಿದಾರರು ಹೊರಡಿಸಿರುವ 14.09.2012ನೇ ದಿನಾಂಕದ ಅಧಿಸೂಚನೆಯನ್ನು ರದ್ದುಪಡಿಸುವುದು;

ಸಿ. ವಿದ್ಯುಚ್ಛಕ್ತಿ ಅಧಿನಿಯಮ, 2003ರ 120(2)(ಎಫ್) ಪ್ರಕರಣದಡಿಯಲ್ಲಿ ಪುನರವಲೋಕನವನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಪರಿಮಿತಿಯ ಅವಧಿಯನ್ನು ನಿರ್ಧರಿಸುವಲ್ಲಿ 2ನೇ ಪ್ರತ್ಯರ್ಜಿದಾರನು ತೆಗೆದುಕೊಂಡ ಕ್ರಮವು ಕಾನೂನುಬಾಹಿರವಾಗಿದೆ ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಯೋಜನೆಗೆ ವಿರುದ್ಧವಾಗಿದೆಯೆಂದು ಘೋಷಿಸುವುದು;

ಡಿ. ಪ್ರಕ್ರಿಯಾ ವೆಚ್ಚವನ್ನು ನೀಡುವುದು;

ಇ. ಮಾನ್ಯ ನ್ಯಾಯಾಲಯವು, ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳಲ್ಲಿ ಯುಕ್ತವೆಂದು ಭಾವಿಸಬಹುದಾದಂಥ ಇತರೆ ಆದೇಶಗಳನ್ನು ಹೊರಡಿಸುವುದು."

3. ಅಪೀಲು ನ್ಯಾಯಾಧಿಕರಣದ ನಿರ್ಣಯವನ್ನು ಪುನರವಲೋಕಿಸುವ ಕಾರ್ಯವಿಧಾನ ಮತ್ತು ಅಧಿಕಾರವು ವಿದ್ಯುಚ್ಛಕ್ತಿ ಅಧಿನಿಯಮದ 120ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಮತ್ತು 120ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಮತ್ತು (ಐ) ಖಂಡಗಳಲ್ಲಿರುತ್ತದೆ. ಅದು ಈ ಮುಂದಿನಂತಿರುತ್ತದೆ :

"120. ಅಪೀಲು ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.–

(1) ಅಪೀಲು ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೂಲಕ ವಿಧಿಸಿದ ಕಾರ್ಯವಿಧಾನದಿಂದ ಬದ್ಧವಾಗಿರತಕ್ಕದ್ದಲ್ಲ. ಆದರೆ ಇದನ್ನು ಸ್ವಾಭಾವಿಕ ನ್ಯಾಯದ ತತ್ವಗಳಿಂದ ನಿರ್ದೇಶಿಸತಕ್ಕದ್ದು ಮತ್ತು ಈ ಅಧಿನಿಯಮದ ಇತರೆ ಉಪಬಂಧಗಳಿಗೆ ಒಳಪಟ್ಟು, ಅಪೀಲು ನ್ಯಾಯಾಧಿಕರಣವು ಇದರ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದು.

2. ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳ

ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು. ಅವುಗಳೆಂದರೆ :–

(ಎ) xxxxx

(ಬಿ) xxxxx

(ಸಿ) xxxxx

(ಡಿ) xxxxx

(ಇ) xxxxx

(ಎಫ್) ತನ್ನ ತೀರ್ಪುಗಳನ್ನು ಪುನರವಲೋಕಿಸುವುದು;

(ಜಿ) xxxxx

(ಹೆಚ್) xxxxx

(ಐ) ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ವಿಷಯ".

4. 176ನೇ ಪ್ರಕರಣದಡಿಯಲ್ಲಿ, ನಿರ್ದಿಷ್ಟವಾಗಿ (2)ನೇ ಉಪಪ್ರಕರಣದ (ಟಿ) ಖಂಡದಲ್ಲಿ ಕೇಂದ್ರ ಸರ್ಕಾರವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, 120ನೇ ಪ್ರಕರಣದ (2)ನೇ ಉಪಪ್ರಕರಣದ (i) ಖಂಡದಡಿಯಲ್ಲಿನ ಸಿವಿಲ್

ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವ ಅಪೀಲು ಪ್ರಾಧಿಕಾರದ ವಿಷಯದಲ್ಲಿ ನಿಯಮಗಳನ್ನು ರೂಪಿಸಿರುತ್ತದೆ ಮತ್ತು ನಿರ್ದಿಷ್ಟವಾಗಿ 13ನೇ ನಿಯಮವು ಈ ಮುಂದಿನಂತಿರುತ್ತದೆ :

> "13. **ಕಾಲ ವಿಸ್ತರಣಾಧಿಕಾರ.**– ನ್ಯಾಯಾಧಿಕರಣವು, ಪ್ರಕರಣದ ನ್ಯಾಯಕ್ಕೆ ಅಗತ್ಯವೆನಿಸಿದಲ್ಲಿ, ಅಂಥ ನಿರೂಪಣೆಗಳ ಮೇಲೆ ಯಾವುದೇ ಕಾರ್ಯವನ್ನು ಮಾಡಲು ಅಥವಾ ಯಾವುದೇ ಕಾರ್ಯವಿಧಾನವನ್ನು ಕೈಗೊಳ್ಳಲು ಈ ನಿಯಮಗಳ ಮೂಲಕ ಗೊತ್ತುಪಡಿಸಿದ ಅಥವಾ ಯಾವುದೇ ಆದೇಶದಿಂದ ನಿಗದಿಗೊಳಿಸಿದ ಕಾಲವನ್ನು ವಿಸ್ತರಿಸಬಹುದು, ಮತ್ತು ಆದ್ದರಿಂದ, ಗೊತ್ತುಪಡಿಸಿದ ಅಥವಾ ಒಪ್ಪಿಕೊಂಡ ಕಾಲವು ಮೀರಿದ ತರುವಾಯವೂ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಯಾವುದೇ ವಿಸ್ತರಣೆಯನ್ನು ಆದೇಶಿಸಬಹುದು".

5. ಪುನರವಲೋಕನ ಅರ್ಜಿಯನ್ನು ಸಲ್ಲಿಸಲು ನಿಗದಿತ ಕಾಲಾವಕಾಶವನ್ನು ನಿಯಮಗಳು ಒದಗಿಸದಿದ್ದಾಗ್ಯೂ, ನಿಯಮಗಳು ಮೌನವಹಿಸುವಂಥ ಸಂದರ್ಭಗಳಲ್ಲಿ ಅಥವಾ ಯಾವುದೇ ಉಪಬಂಧವನ್ನು ಮಾಡದಿರುವ ಸಂದರ್ಭಗಳಲ್ಲಿ, 107ನೇ ನಿಯಮವು ಅಧ್ಯಕ್ಷರಲ್ಲಿ ನಿಹಿತವಾಗಿದ್ದರೂ ಕೂಡ, ತೊಂದರೆಗಳನ್ನು ನಿವಾರಿಸಲು ಸೂಕ್ತ ನಿರ್ದೇಶನಗಳನ್ನು ಹೊರಡಿಸಬೇಕು ಮತ್ತು ನ್ಯಾಯಾಧಿಕರಣದ ಕಾರ್ಯನಿರ್ವಹಣೆಯಲ್ಲಿ ಉದ್ಭವಿಸಬಹುದಾದಂಥ ಯಾವುದೇ ಪರಿಸ್ಥಿತಿ ಅಥವಾ ಸಂದರ್ಭಗಳನ್ನು ನಿಯಂತ್ರಿಸಲು ಅಂಥ ಆದೇಶಗಳು ಅಥವಾ ಸುತ್ತೋಲೆಗಳನ್ನು ಹೊರಡಿಸಬೇಕು. ಈ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರು, ಎಪಿಟಿಎಲ್/ರಿಜಿಸ್ಟ್ರಿ/ಪ್ರೊಸೀಜರ್/2012ರಲ್ಲಿನ 14.9.2012ರ ದಿನಾಂಕದ ಅಧಿಸೂಚನೆಯ ಮೂಲಕ ಅಪೀಲು ನ್ಯಾಯಾಧಿಕರಣದ ಮುಖ್ಯಸ್ಥರು, ಪುನರವಲೋಕನಕ್ಕೆ ಸಂಬಂಧಿಸಿದ (13) ಮತ್ತು (14)ನೇ

ಖಂಡಗಳಡಿಯಲ್ಲಿ ಪ್ರಕ್ರಿಯಾ ನಿರ್ದೇಶನಗಳನ್ನು ನೀಡಿರುತ್ತಾರೆ, ಅವು ಈ ಮುಂದಿನಂತಿವೆ :

**"ಇ. ಪುನರವಲೋಕನ:**

13. ತೀರ್ಪು/ಆಜ್ಞೆ ನೀಡಿದ ದಿನಾಂಕದಿಂದ 30 ದಿನಗಳ ಒಳಗೆ ಪುನರವಲೋಕನ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಮುಂಚಿನ ಅಧಿಸೂಚನೆ ಸಂ. ಎಪಿಟಿಎಲ್/ರಿಜಿಸ್ಟ್ರಿ/ಪ್ರೊಸೀಜರ್/2012 ದಿನಾಂಕ 24.2.2012ನ್ನು ಪುನರುಚ್ಚರಿಸಲಾಗಿದೆ.

14. ಯಾವುದೇ ತೀರ್ಪು/ಆಜ್ಞೆಯ ಪುನರವಲೋಕನಕ್ಕೆ ಸಂಬಂಧಿಸಿದಂತೆ ಒಮ್ಮೆ ಅರ್ಜಿಯನ್ನು ಸಲ್ಲಿಸಲಾಗಿದ್ದರೆ ಮತ್ತು ವಿಲೆಯಾಗಿದ್ದರೆ, ನಂತರ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪುನರವಲೋಕನ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ.

6. ಮೇಲೆ ಹೇಳಿದ ಶಾಸನಾತ್ಮಕ ಉಪಬಂಧಗಳಿಗೆ ಸಂಬಂಧಿಸಿದಂತೆ, ನಿಸ್ಸಂಶಯವಾಗಿ, 120ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡವು, ನ್ಯಾಯಾಧಿಕರಣದ ನಿರ್ಣಯದ ಪುನರವಲೋಕನಕ್ಕೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸುವುದರೊಳಗೆ ಕಾಲಮಿತಿಯ ಅವಧಿಯನ್ನು ನಿಗದಿಪಡಿಸಿದ್ದಾಗ್ಯೂ, ನ್ಯಾಯಾಧಿಕರಣದ ತೀರ್ಪುಗಳನ್ನು ಪುನರವಲೋಕಿಸಲು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟವಾಗಿ ರೂಪಿಸುತ್ತದೆ. 120ನೇ ಪ್ರಕರಣದ (1)ನೇ ಉಪಪ್ರಕರಣವು, ಅಪೀಲು ಪ್ರಾಧಿಕಾರವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ವಿಧಿಸಿದ ಪ್ರಕ್ರಿಯೆ ಮೂಲಕ ಬದ್ಧವಾಗಿರತಕ್ಕದ್ದಲ್ಲ, ಆದರೆ ಸ್ವಾಭಾವಿಕ ನ್ಯಾಯದ ತತ್ವಗಳಿಂದ ನಿರ್ದೇಶಿಸಲ್ಪಡತಕ್ಕದ್ದು ಮತ್ತು ಅಪೀಲು ನ್ಯಾಯಾಧಿಕರಣವು,

ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದೆಂದು ನಿರೂಪಿಸುತ್ತದೆ. ಆದಾಗ್ಯೂ, 2ನೇ ಉಪಪ್ರಕರಣವು, ಸಿವಿಲ್ ನ್ಯಾಯಾಲಯವು ತನ್ನ ತೀರ್ಪನ್ನು ಪುನರವಲೋಕಿಸುವ ಸಂಬಂಧದಲ್ಲಿ ಇತರರ ದಾವೆಗಳೊಂದಿಗೆ ಸದರಿ ದಾವೆಯನ್ನು ಅಧಿವಿಚಾರಿಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳು ಅಪೀಲು ಪ್ರಾಧಿಕಾರದಲ್ಲೂ ನಿಹಿತವಾಗಿರುತ್ತವೆ. ಮತ್ತೊಮ್ಮೆ, 120ನೇ ಪ್ರಕರಣದ (2)ನೇ ಉಪಪ್ರಕರಣದ (i) ಖಂಡವು, ಅಪೀಲು ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಇತರ ವಿಷಯಗಳ ಸಂಬಂಧದಲ್ಲಿನ ಅಧಿಕಾರಗಳನ್ನು ಹೊಂದಿರತಕ್ಕದ್ದೆಂಬುದನ್ನು ನಿರೂಪಿಸುತ್ತದೆ.

7. ಅಧಿನಿಯಮದ 120ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಉದ್ದೇಶವು, ಇಲ್ಲಿಗೆ ಹಾಜರಾಗುವುದಕ್ಕೆ ಪೂರ್ವದಲ್ಲಿಯೇ ವ್ಯಾಜ್ಯಕಾರರ ಕುಂದುಕೊರತೆಯನ್ನು ನಿವಾರಿಸಲು ಪರಿಣಾಮಕಾರಿಯಾದ ಒಂದು ನ್ಯಾಯಿಕ ವೇದಿಕೆಯನ್ನು ಒದಗಿಸಿಕೊಡಬೇಕೆಂಬುದಾಗಿದೆ ಎಂಬುದು ಕಂಡುಬರುತ್ತದೆ. ನ್ಯಾಯಾಧಿಕರಣಕ್ಕೆ ಪ್ರದತ್ತವಾದ ಪುನರವಲೋಕನ ಅಧಿಕಾರವು, ನಿಸ್ಸಂಶಯವಾಗಿ, 30 ದಿನಗಳೊಳಗೆ ಅರ್ಜಿಯನ್ನು ಸಲ್ಲಿಸದಿರುವುದಕ್ಕೆ ಸಂಬಂಧಿಸಿದಂತೆ ಯುಕ್ತ ಕಾರಣವನ್ನು ತೋರಿಸಿದಲ್ಲಿ, ಕಾಲಪರಿಮಿತಿ ಅಧಿನಿಯಮ, 1963ರ ಪರಿಶಿಷ್ಟದ 124ನೇ ಅನುಚ್ಛೇದದಡಿಯಲ್ಲಿ ಗೊತ್ತುಪಡಿಸಿದಂತೆ 30 ದಿನಗಳ ಅವಧಿಯನ್ನು ಮೀರಿ, ಪುನರವಲೋಕನ ಅರ್ಜಿಯನ್ನು ಸಲ್ಲಿಸಿರುವ ಪ್ರಕರಣಗಳಲ್ಲಿ ಕಾಲದ ವಿಸ್ತರಣೆಯನ್ನು ಒಳಗೊಂಡಂಥ, ಸಿವಿಲ್ ಪ್ರಕ್ರಿಯಾ ಸಂಹಿತೆಯ, 1908ರಡಿಯಲ್ಲಿನ ಸಿವಿಲ್ ನ್ಯಾಯಾಲಯದ ಸ್ವರೂಪದಂತೆಯೇ ಇರುತ್ತದೆ.

8. ಕೇಂದ್ರ ಸರ್ಕಾರವು, ಅಪೀಲು ನ್ಯಾಯಾಧಿಕರಣವು, 120ನೇ ಪ್ರಕರಣದ (2)ನೇ ಉಪಪ್ರಕರಣದ (i) ಖಂಡದ ಉದ್ದೇಶಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು ಅಧಿಕಾರಗಳನ್ನು ಚಲಾಯಿಸಬಹುದಾದಂಥ ಹೆಚ್ಚುವರಿ ವಿಷಯಗಳ ಮೇಲೆ, ಪುನರವಲೋಕನ ಅರ್ಜಿಯನ್ನು ಅಂಗೀಕರಿಸಲು ಕಾಲಮಿತಿಯ ಅವಧಿಯನ್ನು

ಒದಗಿಸದೆ ಇದ್ದಾಗ್ಯೂ, ನಿಯಮಗಳನ್ನು ರೂಪಿಸಿರುತ್ತದೆ. 13ನೇ ನಿಯಮವು, ಗೊತ್ತುಪಡಿಸಿದ ಅಥವಾ ಅನುಮತಿಸಿದ ಕಾಲವು ಮೀರಿದ ತರುವಾಯ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಅಗತ್ಯಪಡಿಸಬಹುದಾದ ಪ್ರಕರಣದ ನ್ಯಾಯದಂತೆ ನಿಯಮಗಳಡಿಯಲ್ಲಿ ಗೊತ್ತುಪಡಿಸಿದ ಅಥವಾ ಯಾವುದೇ ಆದೇಶದಿಂದ ನಿಗದಿಪಡಿಸಿದ ಕಾಲವನ್ನು ವಿಸ್ತರಿಸುವ ಅಧಿಕಾರವನ್ನು ನ್ಯಾಯಾಧಿಕರಣದಲ್ಲಿ ನಿಹಿತಗೊಳಿಸಿರುತ್ತದೆ. 13ನೇ ನಿಯಮದಡಿಯಲ್ಲಿ ಉಲ್ಲೇಖಿಸಿರುವ 'ಯಾವುದೇ ಆದೇಶ' ಎಂಬ ಪದಾವಳಿಯು ನಿಯಮಗಳ 107ನೇ ನಿಯಮದಡಿಯಲ್ಲಿನ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಪುನರವಲೋಕನ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ 30 ದಿವಸಗಳ ಕಾಲವನ್ನು ನಿಗದಿಗೊಳಿಸಿ ನ್ಯಾಯಾಧಿಕರಣ ಮಾನ್ಯ ಅಧ್ಯಕ್ಷರು ಹೊರಡಿಸಿರುವ 14.9.2012ನೇ ದಿನಾಂಕದ ಕಾರ್ಯನಿರ್ವಹಣಾ ನಿರ್ದೇಶನಗಳನ್ನು ಸೂಚಿಸುತ್ತಿರುತ್ತದೆ. ಪುನರವಲೋಕನ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ 30 ದಿವಸಗಳ ಚಿರಭೋಗದ ಕಾಲಾವಧಿಯು ಅಗತ್ಯಪಡಿಸಬಹುದಾದ ಪ್ರಕರಣದಲ್ಲಿ ಕಾನೂನಿಗನುಸಾರವಾಗಿ ಕಾಲವಿಸ್ತರಣೆಗೆ ಸಂಬಂಧಿಸಿದಂತೆ ಉಪಬಂಧಿಸುವ 13ನೇ ನಿಯಮದ ಹಿನ್ನೆಲೆಯಲ್ಲಿ ನಮ್ಯವಾಗಿರುವುದಿಲ್ಲ.

9. ಕೇಂದ್ರ ಸರ್ಕಾರವು ರೂಪಿಸಿರುವ ನಿಯಮಗಳ 13ನೇ ನಿಯಮದ ಕೇವಲ ಪರಿಶೀಲನೆಯು, ಅಧಿನಿಯಮದ ಉದ್ದೇಶಗಳನ್ನು ಪರಿಣಾಮಕಾರಿಗೊಳಿಸುವ ಮತ್ತು 30 ದಿವಸಗಳ ಅವಧಿಯನ್ನು ಮೀರಿ ಅರ್ಜಿಯನ್ನು ಪುನರವಲೋಕಿಸುವುದಕ್ಕೆ ಆದ್ಯತೆ ನೀಡಿ ವಿಳಂಬವನ್ನು ಮನ್ನಾಮಾಡಲು ಅಪೀಲು ನ್ಯಾಯಾಧಿಕರಣಗಳೊಂದಿಗೆ ಸೇರಿ, ಪುನರವಲೋಕನ ಅರ್ಜಿಯನ್ನು ಸಲ್ಲಿಸಲು ಕಾಲಮಿತಿಯ ಚಿರಭೋಗದ ಅವಧಿಯನ್ನು ಸಮರ್ಥಗೊಳಿಸುವ ಅವಕಾಶವನ್ನು ಕಲ್ಪಿಸುತ್ತದೆ.

10. ಅಧೀನ ಶಾಸನವು ರಚಿಸಿರುವ ನಿಯಮಗಳನ್ನು, ಅಧಿನಿಯಮಿತಿಯ ತರುವಾಯ ರೂಪಿಸಿರುವುದರಿಂದ, ಅವು ಅಧಿನಿಯಮದ ಉದ್ದೇಶಗಳು ಮತ್ತು ವ್ಯಾಪ್ತಿಯನ್ನು ನಿಶ್ಚಿತಪಡಿಸಿಕೊಳ್ಳುವುದರ ಮೇಲೆ, ಕೆಲವು ಉದ್ದೇಶಗಳಿಗಾಗಿ ಅಧಿನಿಯಮಿತಿಯ ಅವಿಭಾಜ್ಯ ಭಾಗಕ್ಕೆ ಸಂಬಂಧಿಸಿರುತ್ತವೆಂಬುದು ಈಗಾಗಲೇ ಸುಸ್ಥಾಪಿತಗೊಂಡ ಕಾನೂನಾಗಿರುತ್ತದೆ. ನಿಯಮಗಳನ್ನು ರೂಪಿಸಲು ಮೇಲೆ

ಹೇಳಿದ ಶಾಸನಾತ್ಮಕ ಉಪಬಂಧಗಳು ಮತ್ತು ಕೇಂದ್ರ ಸರ್ಕಾರದ ಅಧಿಕಾರದ ಹಿನ್ನೆಲೆಯಲ್ಲಿ, ಜಾರಿಗೆ ತಂದಿರುವ ನಿಯಮಗಳನ್ನು ಅನುಸರಿಸಿ, ಪುನರವಲೋಕನ ಅರ್ಜಿಯನ್ನು ಸಲ್ಲಿಸುವಲ್ಲಿನ ಕಾರ್ಯವಿಧಾನದ ವಿಷಯದಲ್ಲಿ, ಪುನರವಲೋಕನ ಅರ್ಜಿಯನ್ನು ಸಲ್ಲಿಸಲು ಅಧಿನಿಯಮ ಅಥವಾ ನಿಯಮಗಳಡಿಯಲ್ಲಿ ಉಪಬಂಧ ಕಲ್ಪಿಸದಿರುವುದರಿಂದ, ಅದನ್ನು ಸಲ್ಲಿಸಲು ಕಾಲಮಿತಿಯ ಅವಧಿಯನ್ನು ನಿಗದಿಗೊಳಿಸಿ ನಿರ್ದೇಶನಗಳನ್ನು ನೀಡುವಲ್ಲಿ ಮಾನ್ಯ ಅಧ್ಯಕ್ಷರು ಅಧಿಕಾರವನ್ನು ಚಲಾಯಿಸುತ್ತಾರೆ. ಆದರೆ ಇದನ್ನು ಅಧಿನಿಯಮದ ಉದ್ದೇಶಗಳನ್ನು ನಿರ್ವಹಿಸುವ ದೃಷ್ಟಿಯಿಂದ 14.9.2012ನೇ ದಿನಾಂಕದ ನಿರ್ದೇಶನಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ.

11. ಮೇಲೆ ಹೇಳಿದ ವಿಷಯದ ಹಿನ್ನೆಲೆಯಲ್ಲಿ, 30 ದಿನಗಳ ಅವಧಿ ಮೀರಿ ಪುನರವಲೋಕನ ಅರ್ಜಿಯನ್ನು ಸಲ್ಲಿಸಿದಲ್ಲಿ ಮತ್ತು ಮೊಕದ್ದಮೆಯ ನ್ಯಾಯವು ಅಗತ್ಯಪಡಿಸಬಹುದಾದಲ್ಲಿ, ಕಾಲ ವಿಸ್ತರಣೆಯ ವಿಷಯದಲ್ಲಿ ನ್ಯಾಯಾಧಿಕರಣವು ವಿವೇಚನೆಯನ್ನು ಚಲಾಯಿಸಲು ಹಕ್ಕುಗಳನ್ನು ನೀಡಿರುವ ನಿಯಮಗಳ 13ನೇ ನಿಯಮವನ್ನು ಓದಿದಾಗ, ಪುನರವಲೋಕನ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ನಿಯಮಗಳ 107ನೇ ನಿಯಮದಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಮಾನ್ಯ ಅಧ್ಯಕ್ಷರು ಹೊರಡಿಸಿದ 14.9.2012ನೇ ದಿನಾಂಕದ ಅಧಿಸೂಚನೆಯಲ್ಲಿ 30 ದಿನಗಳ ಅವಧಿಯನ್ನು ನಿಗದಿಗೊಳಿಸಿರುತ್ತಾರೆಂಬ ತೀರ್ಮಾನಕ್ಕೆ ಬರಲಾಗಿರುತ್ತದೆ.

12. ಈ ಸಂದರ್ಭಗಳಲ್ಲಿ ಅಪೀಲು ನ್ಯಾಯಾಧಿಕರಣವು 'ನಿಯಮ'ಗಳ 13ನೇ ನಿಯಮದಡಿಯಲ್ಲಿ ನಿಹಿತವಾದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, 30 ದಿನಗಳನ್ನು ಮೀರಿದ ಪುನರವಲೋಕನ ಅರ್ಜಿಯನ್ನು ಸಲ್ಲಿಸುವಲ್ಲಿ ಕಾಲದ ವಿಸ್ತರಣೆಗಾಗಿ ಅರ್ಜಿಗಳನ್ನು ಸಲ್ಲಿಸಲು ಅರ್ಜಿದಾರರನ್ನು ಕರೆದಿರುವುದು ಸಮರ್ಥನೀಯವಾಗಿರುತ್ತದೆ.

ತದನುಸಾರವಾಗಿ ಆದೇಶಿಸಲಾಗಿದೆ.

---